





ಮಂಜುನಾಥ

ಚಿತ್ರ: ದಿಲೀ

ಮೂಲತಃ ಹಾಸನದ ಈ ಹುಡುಗ ಈಗ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಸಂಸ್ಥೆಯಲ್ಲಿ ವಿಶ್ಯುಯಲ್ ಆರ್ಟ್ ಪದವಿ ಓದುತ್ತಿದ್ದಾನೆ. ಬಾಲ್ಯದ ದಿನಗಳಿಂದಲೂ ಚಿತ್ರಕಲೆಯತ್ತ ತುಂಬ ಆಸಕ್ತಿ ಹೊಂದಿದ್ದವ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2002-03ರಲ್ಲಿ 'ಬಾಲ ಪ್ರತಿಭಾ ಪ್ರಶಸ್ತಿ'ಗೆ ಪಾತ್ರನಾದವ.

ಹಲವಾರು ಕಲಾ ಶಿಬಿರ ಮತ್ತು ಏಕವ್ಯಕ್ತಿ ಕಲಾ ಪ್ರದರ್ಶನಗಳಲ್ಲಿ ತನ್ನ ಕಲಾಕೃತಿಗಳ ಪ್ರದರ್ಶನ ನೀಡಿದ್ದಾನೆ.

**ಪ್ರಶಸ್ತಿ:**
- ★ ಆಂಧ್ರಪ್ರದೇಶದ ರಾಜಮಹೇಂದ್ರಿಯ ವಿಶ್ವಕಲಾ ದರ್ಶಿನಿಯ 'ನ್ಯಾಶನಲ್ ಸೂಪರ್ ಆರ್ಟ್ ಸ್ಪಾರ್ಕ್'.
- ★ ಹಾಸನದ ಶಾಂತಲಾ ಫೈನ್ ಆರ್ಟ್ ಪಾಯಿಂಟ್‌ನ 'ರವಿವರ್ಮ ಚಿತ್ರಕಲಾ ಪುರಸ್ಕಾರ'
- ★ ಆಂಧ್ರದ ಅಮಲಾಪುರಂನ ಕೋಣಸೀಮಾ ಚಿತ್ರಕಲಾ ಪರಿಷತ್ ಗೋಲ್ಡ್ ಮೆಡಲ್





**(6ನೇ ಪುಟದಿಂದ)**

ಅಲ್ಲಯ್ಯಾ ಮೀನಿನ ಹುಡುಗ ಎಲ್ಲಿಂದ ಹಿಡಿದು ತಂದೆ ಅಯ್ಯಾ ಇವನ್ನ? ಫ್ರೈ ಮಾಡಿ ಕೊಡ್ತಿಯೊ ಹೆಂಗೆ? ಎಂದು ಕೇಳಿದೆ. 'ಸಾರ್, ಫ್ರೈ ಏನ್ಮಾಡ್ತೀರಾ, ಫ್ರೇಮ್ ಹಾಕಿಕೊಡ್ತೀನಿ, ಮನೆಯಲ್ಲಿ ಬೆಚ್ಚಗೆ ಇಟ್ಟುಕೊಂಡುಬಿಡಿ. ನೋಡ ನೋಡುತ್ತ ಮನೆತುಂಬ ಮರಿ ಮೀನುಗಳೇ ಹರಿದಾಡ್ಯಾವು?' ಎಂದ.

ತಲೆ ಇದೆ ಕಣಯ್ಯಾ, ತುಂಬ ಸೊಗಸಾಗಿ ಮಾತಾಡ್ತಿಯಲ್ಲಯ್ಯಾ... ಯಾವ ಸೀಮೆ ನಿಂದು? ದ.ಕ, ಉ.ಕ...? ಅಂದೆ. 'ಅಯ್ಯೊ ಬಿಡಿ ಸಾರ್ ಅವರಿಗೆಲ್ಲ ಗೊತ್ತಿರೋ ಮೀನುಗಳೆಂದರೆ ಭೂತಾಯಿ, ಪಾಂಪ್ರೆಟ್, ಕಾಣೆ, ಬಂಗುಡೆ, ಮದಿಮಾಲ್, ನಂಗ್, ತಾಟೆ, ಕುರ್ಚಿ, ಬೊಳಂಜೀರ್, ಸೀಗಡಿ, ಬೊಂಡಾಸ್, ಅಡೆಮೀನು... ಆಟೆಯಾ. ನಾನು ಆ(ಹಾ)ಸನದವನು. ಕಲಾವಿದ. ಏಟೊಂದು ಕಲ್ಪಿಸಿಕೊಳ್ತೀನಿ... ಹೋಗ್ಲಿ ಬಿಡಿ ಸಾರ್, ಈ ಥರದ ಮೀನುಗಳನ್ನು ನೀವಾದರೂ ಕಂಡಿದ್ದೀರಾ?' ಎಂದ.

ನಾ ತಿಂದ ಬೇಜಾನ್ ಮೀನುಗಳಲ್ಲಿ ಇವ್ಯಾವೂ ಇರಲಿಲ್ಲ ಬಿಡಪ್ಪಾ. ಈ ಪಾಟಿ ತರಹೇವಾರಿ ಮೀನುಗಳನ್ನಂತೂ ಕಂಡೇ ಇಲ್ಲ ಅಂದೆ.

ಅಲ್ಲಿ ಹರಡಿಕೊಂಡಿದ್ದ ಒಂದೊಂದು ಮೀನುಗಳು ನೋಡುಗರ ಕಣ್ಮನಗಳನ್ನು ಸೆಳೆಯುತ್ತಲೇ ಇದ್ದವು. ಅಂದು ಅವಕ್ಕೆ ಸೋಲದವರೇ ಇರಲಿಲ್ಲ. ಮೀನಿನ ಫೋಟೊ ನೆನಪಿಸಿದರೆ ಸಾಕು, ಮೂಗು ಮುಚ್ಚಿಕೊಳ್ಳುವಂಥವರೂ ಬಿಟ್ಟ ಕಂಗಳಿಂದ ಅವನ್ನು ನೋಡುತ್ತಲೇ ನಿಂತುಕೊಂಡಿದ್ದರು. ನಾನೂ ಅವರಲ್ಲೊಬ್ಬನಾಗಿದ್ದೆ. ಪುಟ್ಟ ಕ್ಯಾಮೆರಾದಲ್ಲಿ ಇಷ್ಟದ ಮೀನುಗಳನ್ನು ಇಳಿಸಿಕೊಂಡೆ.

ಚಿತ್ರಸಂತೆಗೆ ಈ ಮೀನುಗಳ ಹಿಡಿದು ತಂದಿದ್ದ ಹುಡುಗನ ಹೆಸರು ಮಂಜುನಾಥ. ಹೆಸರು ಧರ್ಮಸ್ಥಳದ ಮಂಜುನಾಥನದಾದರೂ ಊರು ಮಾತ್ರ ಹಾಸನ. ಮೈಸೂರಿನ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನಲ್ಲಿ 'ಬ್ಯಾಚಲರ್ ಆಫ್ ವಿಶ್ಯುಯಲ್ ಆರ್ಟ್' ಪದವಿ ಓದುತ್ತಿರುವ ವಿದ್ಯಾರ್ಥಿ.